**ಅವಳು**

'ನಾ ಮಲಗಿದ ಹಾಸಿಗೆಯ ಮೇಲೇ ಬೇಕಾದಷ್ಟು ಜಾಗವಿದ್ದರೂ, ದೂರದ ಕುರ್ಚಿ ಎಳೆದುಕೊಂಡು ಕುಳಿತುಕೊಳ್ಳುವ ಅವಶ್ಯಕತೆ ಏನಿತ್ತೋ, ಗಡ್ಡದ ಗುಮ್ಮನೇ? ಅಮ್ಮ ಕಾಫಿ ತರಲು ಒಳಗೆ ಹೋದಾಗ ಒಮ್ಮೆ ಹಣೆ ಮುಟ್ಟಿ ನೋಡಿದ್ದರೆ ನಿನ್ನಪ್ಪನ ಗಂಟೇನಾದರೂ ಕಡಿಮೆಯಾಗುತ್ತಿತ್ತಾ... ನಾನು ಮೂರು ದಿವಸ ಮಲಗಿದ್ದಕ್ಕೂ ಸಾರ್ಥಕವಾಗುತ್ತಿತ್ತಲ್ಲೋ, ಸಂತಾಪ ಸಿಂಗಾss, ಎಂದು ಕೆಟ್ಟದನಿಯಲ್ಲಿ ಕಿರುಚಬೇಕೆಂದುಕೊಂಡವಳು, ಇಲ್ಲಿಯವರೆಗೆ ಬರುವ ಬುದ್ಧಿ ಆದರೂ ಆ ದೇವರು ಕರುಣಿಸಿದನಲ್ಲಾ ಎಂದು ಮಗ್ಗಲು ಮುರಿಯುವವಳು.

**ಅವನು**

'ಪವಿತ್ರ ದೇವಾಲಯದಂತಹ ಮುಖ ಹೊತ್ತು, ನಡುರಸ್ತೆಯಲ್ಲಿ ಐಸ್‌ಕ್ರೀಮ್ ಬೇಕೆಂದು ಹಟ ಹಿಡಿಯುತ್ತೀಯಲ್ಲೇ ಹುಡುಗೀ, ಕೊರೆವ ಚಳಿಯ ಈ ಸಂಜೆಯಲ್ಲಿ ಐಸ್‌ಕ್ರೀಮ್ ತಿನ್ನುವುದು ಸರಿಯೇನೇ?' ಎಂದು ಕೇಳಬೇಕೆನಿಸಿದರೂ, ಅವಳಿಷ್ಟವಾದ ಸಂಪಿಗೆ ಬಣ್ಣದ ಐಸ್‌ಕ್ರೀಮನ್ನು ತರದೇ ಇರಲು ಸಾಧ್ಯವಾಗದೇ– ಅದನ್ನು ಕೈಯಿಂದ ಹಿಡಿದುಕೊಳ್ಳುವ ಗೋಜಿಗೂ ಹೋಗದೇ ತನ್ನ ಕೈಯಲ್ಲಿರುವಾಗಲೇ ತಿನ್ನುತ್ತಿರುವ ಅವಳ ತಾಯ್ತನದ ಆತ್ಮೀಯತೆ ಮೈ ತುಂಬ ಹರಿದು 'ಇನ್ನೊಂದು

## ಉಲ್ಲಾಸ ಹೆಗಡೆ



ಕನ್ನಡ ಕಥಾ ಸಾಹಿತ್ಯಕ್ಕೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕು ನೀಡಿದ ಮೌಲಿಕ ಕೊಡುಗೆಗಳಲ್ಲಿ ಯಶವಂತ ಚಿತ್ತಾಲ, ಸುಂದರ ನಾಡಕರ್ಣಿ, ಜಯಂತ ಕಾಯ್ಕಿಣಿ, ವಿವೇಕ ಶಾನಭಾಗ, ಎಂ.ಎಚ್. ನಾಯಕ ಬಾಡ ಪ್ರಮುಖವಾದ ಹೆಸರುಗಳಾಗಿವೆ. ಇದೇ ಸಾಲಿಗೆ ಸೇರಬಹುದಾದ ಮತ್ತೊಂದು ಹೆಸರು ಉಲ್ಲಾಸ ಹೆಗಡೆ ಅವರದು. 2004ರಲ್ಲಿ ಅವರ ಅಕಾಲ ನಿಧನ ಆಗಿಲ್ಲದಿದ್ದರೆ, ಅವರ ಮತ್ತಷ್ಟು ಕಥಾಸಂಕಲನಗಳು, ಕಾದಂಬರಿಗಳು ಪ್ರಕಟವಾಗಿ ಜನಪ್ರಿಯವಾಗಬಹುದಿತ್ತು. ಅಷ್ಟೇ ಏಕೆ, ಅವರ ವಿಶೇಷ ಪರಿಣತಿಯ ಕ್ಷೇತ್ರವಾದ ಬಯೋಕೆಮಿಸ್ಟ್ರಿಯಲ್ಲಿ ಸಹ ಹೊಸ ಆವಿಷ್ಕಾರಗಳನ್ನು ಅವರು ಮಾಡಿರುತ್ತಿದ್ದರು.

ಉಲ್ಲಾಸ ಹುಟ್ಟಿದ್ದು ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ. ಅಲ್ಲಿಯೇ ಓದಿ ಬೆಳೆದದ್ದು. ಅವರ ಸ್ನಾತಕೋತ್ತರ ಓದು ಧಾರವಾಡದಲ್ಲಿ ಆಗಿದ್ದರೆ, ಸಂಶೋಧನಾ ಪದವಿ ಪುಣೆಯ ವಿಶ್ವವಿದ್ಯಾಲಯದಲ್ಲಿ ಆಗಿತ್ತು. ಓದಿನಲ್ಲಿ ಚುರುಕಾಗಿದ್ದ ಉಲ್ಲಾಸರಿಗೆ ತಮ್ಮ ಅಧ್ಯಯನದ ವಿಷಯದ ಕುರಿತು ಅತ್ಯಂತ ಆಳ ಜ್ಞಾನದ ಜೊತೆ, ತುಂಬಾ ಪ್ರೀತಿ ಸಹ ಇತ್ತು. ಯಾರಿಗಾದರೂ ಸರಿ, ಬಯೋಕೆಮಿಸ್ಟ್ರಿಯ ಕುರಿತು ವಿವರಿಸಿ ಹೇಳಲು ಎಷ್ಟೇ ಹೊತ್ತಿಗೂ ಅವರು ತಯಾರಿರುತ್ತಿದ್ದರು. ಮುಂದೆ ಅವರು ಅಹಮದನಗರದಲ್ಲಿ ಸ್ನಾತಕೋತ್ತರ ವಿಭಾಗದಲ್ಲಿ ಕಲಿಸುತ್ತಿದ್ದಾಗ, ತುಂಬಾ ವಿದ್ಯಾರ್ಥಿಪ್ರಿಯ ಶಿಕ್ಷಕರೆಂದು ಹೆಸರುವಾಸಿಯಾಗಿದ್ದರು.

ಹೀಗೆ ಬಯೋಕೆಮಿಸ್ಟ್ರಿಯಲ್ಲಿ ಸಂಶೋಧಕರಾಗಿದ್ದರೂ, ಉಲ್ಲಾಸ ಮೂಲತಃ ಭಾವಜೀವಿ. ಕತೆ